ಹತ್ತಿ ಕಟ್ಟಿಗೆ ಬಳಸಿ : ಮಣ್ಣಿನ ಫಲವತ್ತತೆ ಹೆಚ್ಚಿಸಿ

ವೈ. ಆರ್. ಆಲದಕಟ್ಟಿ

ಪ್ರಕಟಣಾ ಕೇಂದ್ರ, ಕೃಷಿ ವಿಶ್ವವಿದ್ಯಾಲಯ, ಧಾರವಾಡ – ೫೮೦ ೦೦೫

☎: ೦೮೩೬–೨೭೪೮೭೪೮ **ಮಿಂಚಂಚೆ:** editor@uasd.in

ಉತ್ತಮ ಇಳುವರಿ ಬರಲು ಮಣ್ಣಿನ ಫಲವತ್ತತೆ ಬಹು ಮುಖ್ಯ. ಬಳಕೆಯಾದಂತೆಲ್ಲಾ ಮಣ್ಣಿನ ಪೋಷಕಾಂಶಗಳು ಕಡಿಮೆಯಾಗುತ್ತಾ ಹೋಗುತ್ತವೆ. ಕೊರತೆಯಾಗದಂತೆ ನೋಡಿಕೊಳ್ಳಲು ಮಣ್ಣಿಗೆ ಪುನಃ ಆ ಪೋಷಕಾಂಶಗಳನ್ನು ಸೇರಿಸಬೇಕಾಗುತ್ತದೆ. ಹತ್ತಿ ಕಟ್ಟಿಗೆಯನ್ನು ಮಣ್ಣಿಗೆ ಸೇರಿಸುವ ವಿಧಾನವು ಹೆಚ್ಚು ಪ್ರಯೋಜನಕಾರಿ. ಹತ್ತಿ ಕಟ್ಟಿಗೆಯನ್ನು ಮರುಬಳಸಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದು ಹೇಗೆ, ಅದರಿಂದಾಗುವ ಲಾಭಗಳೇನು ಎಂಬುದನ್ನು ಈ ಲೇಖನ ವಿವರಿಸುತ್ತದೆ.

ಹತ್ತಿ ಕಟ್ಟಿಗೆಯಿಂದ ಕಾಂಪೋಸ್ಟ್ ತಯಾರಿಕೆ

ವಿವಿಧ ಬೆಳೆಗಳ ಉತ್ಪಾದನಾ ಮಟ್ಟದ ಸುಸ್ಥಿರತೆಗೆ ಮಣ್ಣಿನ ಭೌತಿಕ, ರಾಸಾಯನಿಕ, ಜೈವಿಕ ಗುಣಧರ್ಮಗಳ ಕಾಪಾಡುವಿಕೆ ಅತೀ ಅವಶ್ಯಕವಾಗಿದೆ. ಈ ದಿಶೆಯಲ್ಲಿ ಬೆಳೆ ಉತ್ಪಾದನೆಯಲ್ಲಿ ರಸಗೊಬ್ಬರಗಳ ಜೊತೆಗೆ ಸಾವಯವ ಗೊಬ್ಬರಗಳ ಬಳಕೆ ಅನಿವಾರ್ಯವಾಗಿದ್ದು ಸಾವಯವ ಗೊಬ್ಬರಗಳ ತಯಾರಿಕೆಯಲ್ಲಿ ವಿವಿಧ ಬೆಳೆಗಳ ಬೆಳೆಯುಳಿಕೆಗಳ ಬಳಕೆ ಅವಶ್ಯವೆನಿಸಿದೆ.

- ಒಂದು ಸಮೀಕ್ಷೆಯಂತೆ ನಮ್ಮ ದೇಶದಲ್ಲಿ ಪ್ರತಿವರ್ಷ ಅಂದಾಜು ೪೦೦ ದಶಲಕ್ಷ ಟನ್ ಗಳಷ್ಟು ಬೆಳೆಯುಳಿಕೆ ಲಭ್ಯವಾಗುತ್ತಿದ್ದು ಇವುಗಳ ಸಮರ್ಥ ಮರು ಬಳಕೆಯಿಂದಲೇ ಸುಮಾರು ೫–೬ ದಶಲಕ್ಷ ಟನ್‌ಗಳಷ್ಟು ಸಾರಜನಕ, ರಂಜಕ, ಪೊಟ್ಯಾಷ್ ಪೋಷಕಾಂಶಗಳನ್ನು ಮಣ್ಣಿಗೆ ಒದಗಿಸಬಹುದಾಗಿದೆ.
- ಒಟ್ಟಾರೆ ದೊರೆಯುತ್ತಿರುವ ಬೆಳೆಯುಳಿಕೆಗಳ ಶೇ. ೩೦ ರಷ್ಟು ದನಗಳಿಗೆ ಮೇವು/ಹೊಟ್ಟಿನಂತೆ ಉಪಯೋಗವಾದರೆ, ಶೇ. ೧೦ ರಷ್ಟು ಸಾವಯವ ವಸ್ತುವಾಗಿ ಹಾಗೂ ಇನ್ನುಳಿದ ಶೇ. ೬೦ ರಷ್ಟು ಉರುವಲಿಗೆ ಉಪಯೋಗಿಸುತ್ತಿದ್ದು, ಅದರಲ್ಲಿನ ಪೋಷಕಾಂಶಗಳು ವ್ಯರ್ಥವಾಗಿ ಹಾಳಾಗುತ್ತಿವೆ.
- ಪ್ರತಿವರ್ಷ ಹತ್ತಿ ಕಟ್ಟಿಗೆ ಉತ್ಪಾದನೆಯು ಸುಮಾರು ೨೦ ದಶಲಕ್ಷ ಟನ್‌ಗಳಷ್ಟಿದೆ.
- ಹತ್ತಿ ಕಟ್ಟಿಗೆಯು ಸರಾಸರಿ ಶೇ. ೦.೬ ಸಾರಜನಕ, ೦.೨೫ ರಂಜಕ, ಹಾಗೂ ೦.೮೨ ರಷ್ಟು ಪೊಟ್ಯಾಷ್ ಪೋಷಕಾಂಶದ ಜೊತೆಗೆ ಲಘು ಪೋಷಕಾಂಶ ಗಳನ್ನು ಹೊಂದಿರುವದು.
- ಶೇ.೯೦ ರಷ್ಟು ಹತ್ತಿ ಕಟ್ಟಿಗೆ ಉರುವಲುಗಾಗಿಯೇ ಬಳಕೆಯಾಗುತ್ತಿರುವದರಿಂದ ಅದರಲ್ಲಿನ ಉಪಯುಕ್ತ ಸಸ್ಯ ಪೋಷಕಾಂಶಗಳು ಬೆಳೆ ಉತ್ಪಾದನೆಯಲ್ಲಿ ಮರು ಬಳಕೆಯಾಗುತ್ತಿಲ್ಲ.
- ಹತ್ತಿ ಕಟ್ಟಿಗೆಯನ್ನು ಸೂಕ್ತವಾಗಿ ಬೆಳೆ ಉತ್ಪಾದನೆಯಲ್ಲಿ ಮರುಬಳಕೆ ಮಾಡಿದರೆ ಮಣ್ಣಿನ ಫಲವತ್ತತೆಯ ಸುಧಾರಣೆಯೊಂದಿಗೆ ಬೆಳೆ ಇಳುವರಿ ಸ್ಥಿರತೆ ಕಾಯ್ದುಕೊಳ್ಳಲು ಸಾಧ್ಯ.

ಬೆಳೆ ಉತ್ಪಾದನೆಯಲ್ಲಿ ಹತ್ತಿ ಕಟ್ಟಿಗೆ ಮರುಬಳಕೆ ಕ್ರಮಗಳು

- ಹತ್ತಿ ಬೆಳೆಯಲ್ಲಿ ಕೊನೆಯ ಬೀಡು ಹತ್ತಿ ಬಿಡಿಸಿದ ನಂತರ ರೋಟೋವೇಟರನಿಂದ ಹತ್ತಿ ಕಟ್ಟಿಗೆಯನ್ನು ಮಣ್ಣಿನಲ್ಲಿ ಸೇರಿಸುವುದು.

ಕೋಷ್ಟಕ ೧. ವಿವಿಧ ಹತ್ತಿ ಪ್ರಭೇದಗಳಿಂದ ಉತ್ಪಾದನೆಯಾಗುವ ಹತ್ತಿಕಟ್ಟಿಗೆಯ ವಿವರ (ಸರಾಸರಿ)

ಹತ್ತಿಯ ಪ್ರಭೇದ	ಉತ್ಪಾದನೆಯಾಗುವ ಒಣ ಸಸ್ಯರಾಶಿ (Biomass)		ಪೋಷಕಾಂಶಗಳ ಪ್ರಮಾಣ (ಶೇ.)		
	ಉದುರಿದ ಒಣಎಲೆ ಕ್ವಿಂ/ಹೆ	ಒಣ ಕಟ್ಟಿಗೆ ಕ್ವಿಂ/ಹೆ	ಸಾರಜನಕ	ರಂಜಕ	ಪೊಟ್ಯಾಷ್
ಹೈಬ್ರಿಡ್ ಹತ್ತಿ (ಸಜಾತಿ)	೬.೦	೬೫.೦	೦.೬೨	೦.೨೦	೦.೮೨
ಹೈಬ್ರಿಡ್ ಹತ್ತಿ (ವಿಜಾತಿ)	೭.೦	೭೦.೦	೦.೬೫	೦.೨೫	೦.೯೦
ಜಯಧರ ಜಾತಿ ತಳಿಗಳು	೫.೦	೫೫.೦	೦.೫೮	೦.೧೮	೦.೮೦

- ಹತ್ತಿ ಕಟ್ಟಿಗೆಯನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ಕತ್ತರಿಸಿ ಜಮೀನಿನ ಮೇಲೆ ಹೊದಿಕೆಯಂತೆ ಹಾಕುವುದು, ನಂತರ ಹಂಗಾಮು ಪೂರ್ವದಲ್ಲಿ ರಂಟೆ ಹೊಡೆದು ಮಣ್ಣಿನಲ್ಲಿ ಸೇರಿಸುವುದು.
- ಹತ್ತಿ ಕಟ್ಟಿಗೆಯನ್ನು ಯಂತ್ರದಿಂದ ತುಂಡರಿಸಿ/ಪುಡಿ ಮಾಡಿ ನೇರವಾಗಿ ಮಣ್ಣಿನಲ್ಲಿ ಸೇರಿಸುವುದು ಅಥವಾ ಎರೆಹುಳು ಗೊಬ್ಬರ ಅಥವಾ ಕಾಂಪೋಸ್ಟ್ ತಯಾರಿಕೆಯಲ್ಲಿ ಉಪಯೋಗಿಸುವುದು.
- ಸಮರ್ಥವಾಗಿ ಹತ್ತಿ ಕಟ್ಟಿಗೆಯನ್ನು ಕಳಿಸುವ **"ಜೈವಿಕ ಸೂಕ್ಷ್ಮ ಜೀವಿ"** ಗಳನ್ನು ಬಳಸಿ ಉತ್ತಮ ಕಾಂಪೋಸ್ಟ್ ತಯಾರಿಸುವುದು.
- ವಿವಿಧ ಹತ್ತಿ ಪ್ರಭೇದಗಳಿಂದ ಉತ್ಪಾದನೆಯಾಗುವ ಹತ್ತಿಕಟ್ಟಿಗೆ ವಿವರವನ್ನು ಕೋಷ್ಟಕ ೧ ರಲ್ಲಿ ಕೊಡಲಾಗಿದೆ.

ಹತ್ತಿ ಕಟ್ಟಿಗೆಯನ್ನು ಕಳಿಸುವ ಸೂಕ್ಷ್ಮಜೀವಿಗಳು

ಹತ್ತಿ ಕಟ್ಟಿಗೆಯಲ್ಲಿ **'ಲಿಗ್ನಿನ್'** ಹಾಗೂ **'ಸೆಲ್ಯುಲೋಸ್'** ಅಂಶಗಳು ಹೆಚ್ಚಿನ ಪ್ರಮಾಣದಲ್ಲಿದ್ದು, ಇವುಗಳನ್ನು ತ್ವರಿತವಾಗಿ ಹಾಗೂ ಸಮರ್ಥವಾಗಿ ಕಳಿಸುವಂತಹ / ವಿಭಜಿಸುವಂತಹ ಸೂಕ್ಷ್ಮಾಣುಗಳು ಅವಶ್ಯ. ಇವುಗಳಿಗೆ **'ಕಾಂಪೋಸ್ಟ್ ತಯಾರಿಸುವ ಜೈವಿಕ ಗೊಬ್ಬರ'** ಗಳೆನ್ನುವರು. ಒಟ್ಟು ನಾಲ್ಕು ರೀತಿಯ ಸೂಕ್ಷ್ಮ ಜೀವಿಗಳಿಂದ ಹತ್ತಿ ಕಟ್ಟಿಗೆಯ **'ಲಿಗ್ನಿನ್' 'ಸೆಲ್ಯುಲೋಸ್'** ವಿಭಜನೆ ಕ್ರಿಯೆ ತೀವ್ರವಾಗುವುದು. ***"ಫಿನರೋಖೀಟ್"*** ಹಾಗೂ ***"ಫ್ಲೂರೋಟಸ್"*** ಸೂಕ್ಷ್ಮಜೀವಿಗಳು ಹತ್ತಿಕಟ್ಟಿಗೆಯಲ್ಲಿನ **ಲಿಗ್ನಿನ್** ಅಂಶವನ್ನು ವಿಭಜನೆ ಮಾಡುವವು. ***"ಟ್ರೈಕೋಡರ್ಮ ವಿರಿಡೆ"*** ಹಾಗೂ ***"ಎಸ್ಪರಜಿಲಸ್ ಅವಮೋರಿ"*** ಇವು ಹತ್ತಿಕಟ್ಟಿಗೆಯಲ್ಲಿನ ಸೆಲ್ಯುಲೋಸ್ ಅಂಶವನ್ನು ವಿಭಜಿಸುವವು.

ಹತ್ತಿ ಕಟ್ಟಿಗೆಯಿಂದ ಕಾಂಪೋಸ್ಟ್ ತಯಾರಿಸುವ ವಿಧಾನ

- ಹತ್ತಿ ಕಟ್ಟಿಗೆಯನ್ನು ಭೂಮಿಯ ಮೇಲ್ಭಾಗದಲ್ಲಿ ಗುಡ್ಡೆ ಹಾಕಿ ಅಥವಾ ೩ ಅಡಿ ಆಳದ ಗುಂಡಿಯಲ್ಲಿ ಸಂಗ್ರಹಿಸಿ ಕಾಂಪೋಸ್ಟ್ ತಯಾರಿಸಬಹುದು.
- ಗುಂಡಿಯ ತಳಭಾಗಕ್ಕೆ ೪–೫ ಅಂಗುಲ ದಪ್ಪದಷ್ಟು ನೀರು ಹೀರುವ ಕಟ್ಟಿಗೆ ಪುಡಿ ಅಥವಾ ತೆಂಗಿನ ಗರಿ ಹಾಕಿ ಗಟ್ಟಿ ಮಾಡುವದು.
- ಹತ್ತಿ ಕಟ್ಟಿಗೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಚಿಕ್ಕ ಚಿಕ್ಕ ತುಂಡುಗಳಾಗಿ ಕತ್ತರಿಸಿ ಅಂದಾಜು ೬–೮ ಅಂಗುಲ ದಪ್ಪದಷ್ಟು ಪದರಿನಂತೆ ಗುಂಡಿಯಲ್ಲಿ ಹರಡಬೇಕು.
- ಒಂದು ಟನ್ ಹತ್ತಿ ಕಟ್ಟಿಗೆಗೆ ತಲಾ ೧೫ ಕಿ. ಗ್ರಾಂ ಯೂರಿಯಾ ಹಾಗೂ ಸೂಪರ್ ಫಾಸ್ಫೇಟ್ / ಕಲ್ಲು ರಂಜಕ ಗೊಬ್ಬರವನ್ನು ೨೦೦ ಲೀಟರ್ ನೀರಿನಲ್ಲಿ ಕರಗಿಸಿ ತಯಾರಿಸಿದ ದ್ರಾವಣವನ್ನು ಕಟ್ಟಿಗೆಯ ಮೇಲೆ ಸರಿಯಾಗಿ ತೊಯ್ಯುವಂತೆ ಸಿಂಪಡಿಸಬೇಕು.
- ಒಂದು ಟನ್ ಹತ್ತಿ ಕಟ್ಟಿಗೆಗೆ ೨೫೦ ಗ್ರಾಂ ನಷ್ಟು ನಾಲ್ಕು ಬಗೆಯ ಪ್ರತಿ ಜೈವಿಕ ಸೂಕ್ಷ್ಮ ಜೀವಿಯ ಕಲ್ಚರ್, ಅಂದರೆ ಒಟ್ಟಾರೆ ೧ ಕಿ.ಗ್ರಾಂ **"ಕಟ್ಟಿಗೆ ಕಳಿಸುವ ಜೈವಿಕ ಕಲ್ಚರ್ಸ್" ನ್ನು** ೨೦೦ ಲೀಟರ್ ನೀರಿನಲ್ಲಿ ಬೆರೆಸಿದ ದ್ರಾವಣವನ್ನು ಹತ್ತಿ ಕಟ್ಟಿಗೆಯ ಮೇಲೆ ತೊಯ್ಯುವಂತೆ ಚಿಮುಕಿಸಬೇಕು.
- ನಂತರ ಈ ಪದರಿನ ಮೇಲೆ ಲಭ್ಯವಿರುವ ಹಸಿರೆಲೆ ಗೊಬ್ಬರದ ಎಲೆಗಳನ್ನು ಹಾಕಿ ನಂತರ ತೆಳುವಾಗಿ ದನಗಳ ಸಗಣಿ/ಗಂಜಳ ಮಿಶ್ರಣವನ್ನು ನೀರಿನಲ್ಲಿ ಬೆರೆಸಿ ಕಟ್ಟಿಗೆಯ ಮೇಲೆ ಚಿಮುಕಿಸಬೇಕು. ಇದಾದ ನಂತರ ತೆಳುವಾಗಿ ಕೆಂಪು/ಕಪ್ಪು ಮಣ್ಣನ್ನು ಮೇಲ್ಭಾಗದಲ್ಲಿ ಪದರಿನಂತೆ ಹಾಕಿ ಚೆನ್ನಾಗಿ ನೀರಿನಿಂದ ತೋಯಿಸಬೇಕು. ಇಲ್ಲಿಗೆ ಒಂದು ಪದರ ಮುಗಿದಂತೆ.

- ಪುನಃ ಈ ಪದರಿನ ಮೇಲೆ ೬ ಅಂಗುಲದಷ್ಟು ದಪ್ಪವಾಗಿ ಹತ್ತಿ ಕಟ್ಟಿಗೆ ಹಾಕಿ ಅದರ ಮೇಲೆ ಮೊದಲನೆ ಪದರಿಗೆ ಹಾಕಿದಂತೆ ರಸ ಗೊಬ್ಬರ ನೀರು, ಸೂಕ್ಷ್ಮ ಜೀವಿಗಳ ಕಲ್ಚರ್ಸ್, ಹಸಿರೆಲೆ ಗೊಬ್ಬರಗಳ ಪದರು, ಸಗಣಿ ನೀರು ಹಾಗೂ ಮೇಲ್ಭಾಗದಲ್ಲಿ ಮಣ್ಣಿನ ಪದರು ಹಾಕಿದ ನಂತರ ಮತ್ತೆ ನೀರು ಹಾಕಬೇಕು.
- ಈ ರೀತಿ ಕಟ್ಟಿಗೆ ತುಂಬುವ ವಿಧಾನವನ್ನು ೩ ಅಡಿ ಆಳದ ಗುಂಡಿ ತುಂಬುವವರೆಗೆ ಅಥವಾ ಭೂಮಿಯ ಮೇಲ್ಭಾಗದಲ್ಲಿ ೬ ಅಡಿ ಎತ್ತರ ಬರುವವರೆಗೆ ಪದರಿನಂತೆ ಪುನರಾವರ್ತಿಸಬೇಕು. ಪ್ರತಿ ಪದರಿಗೆ "ಜೈವಿಕ ಸೂಕ್ಷ್ಮ ಜೀವಿಗಳ ಕಲ್ಚರ್ಸ್" ಬೆರೆಸಿದ ನೀರನ್ನು ಚಿಮುಕಿಸುವುದು ಮುಖ್ಯ.
- ಕೊನೆಗೆ ಗುಂಡಿಯ ಮೇಲ್ಭಾಗವನ್ನು ನೀರಿನಿಂದ ಚೆನ್ನಾಗಿ ತೋಯಿಸಿ ಬೆಳೆಯುಳಿಕೆಗಳಿಂದ ಅಥವಾ ತೆಂಗಿನ ಗರಿಗಳಿಂದ ಹೊದಿಕೆ ಹಾಕಬೇಕು.
- ವಾರಕ್ಕೊಮ್ಮೆ ಗುಂಡಿಯ ಮೇಲ್ಭಾಗದ ಮೇಲೆ ನೀರು ಹಾಕುತ್ತಿರಬೇಕು, ಗುಂಡಿಯಲ್ಲಿ ಸುಮಾರು ಶೇ. ೬೦ ರಷ್ಟು ತೇವಾಂಶ ಇರುವಂತೆ ನೋಡಿಕೊಳ್ಳುವುದು ಅವಶ್ಯ.
- ತಿಂಗಳಿಗೊಮ್ಮೆ ಗುಂಡಿಯಲ್ಲಿನ ಕಟ್ಟಿಗೆಯನ್ನು ತಿರುಗಿಸಿ ಹಾಕುತ್ತಿದ್ದರೆ ಕಟ್ಟಿಗೆ ಕಳಿಯುವಿಕೆಯು ತೀವ್ರವಾಗುವುದು.
- ಗುಂಡಿ ತುಂಬಿದ ೩ ತಿಂಗಳಲ್ಲಿ ಹತ್ತಿ ಕಟ್ಟಿಗೆ ಚೆನ್ನಾಗಿ ಕಳಿತು ದುರ್ವಾಸನೆಯಿಲ್ಲದ ಉತ್ತಮ ಕಾಂಪೋಸ್ಟ್ ತಯಾರಾಗುವುದು.

ಹತ್ತಿ ಕಟ್ಟಿಗೆ ಮರುಬಳಕೆಯಿಂದಾಗುವ ಲಾಭಗಳು

- ಹತ್ತಿ ಕಟ್ಟಿಗೆಯಲ್ಲಿನ ಪ್ರಧಾನ ಹಾಗೂ ಲಘು ಪೋಷಕಾಂಶಗಳ ಮರುಬಳಕೆಗೆ ಸಾಧ್ಯವಾಗುವದು.
- ಮಣ್ಣಿನ ಸಾವಯವ ಇಂಗಾಲ ಹಾಗೂ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯದಲ್ಲಿ ಹೆಚ್ಚಳವಾಗಿ ಮಣ್ಣಿನ ಭೌತಿಕ ಗುಣಧರ್ಮಗಳ ಸುಧಾರಣೆಯಾಗುವುದು
- ನಿರಂತರ ೩-೪ ವರ್ಷಗಳವರೆಗೆ ಪ್ರತಿ ಹೆಕ್ಟೇರಿಗೆ ಅಂದಾಜು ೫ ಟನ್ ಹತ್ತಿ ಕಟ್ಟಿಗೆಯನ್ನು ಮಣ್ಣಿಗೆ ಮರು ಸೇರ್ಪಡೆ ಮಾಡುವುದರಿಂದ ಹತ್ತಿ, ಗೋವಿನ ಜೋಳ ಮುಂತಾದ ಬೆಳೆಗಳಿಗೆ ಒದಗಿಸಬೇಕಾದ ರಸಗೊಬ್ಬರಗಳ ಪ್ರಮಾಣದಲ್ಲಿ ಶೇ. ೨೫ ರಷ್ಟು ಕಡಿಮೆ ಮಾಡಿ ಬೆಳೆ ಇಳುವರಿಯಲ್ಲಿ ಶೇ. ೨೫-೩೦ ರಷ್ಟು ಹೆಚ್ಚಳ ಸಾಧಿಸಬಹುದು.
- **ಸುಡುವುದು ಬೇಡ ಹತ್ತಿ ಕಟ್ಟಿಗೆ -ಮರಳಿಸಿ ಮಣ್ಣಿಗೆ ಸುಧಾರಿಸಿ ಮಣ್ಣಿನ ಜೀವಂತಿಕೆ !**

  ಕಟ್ಟಿಗೆ ಕಳಿಸುವ "ಜೈವಿಕ ಸೂಕ್ಷ್ಮಜೀವಿ ಕಲ್ಚರ್ಸ್‌ಗಳು" ಧಾರವಾಡ ಕೃವಿವಿ ಯ ಕೃಷಿ ಜೀವಶಾಸ್ತ್ರ ವಿಭಾಗದಲ್ಲಿ ಹಾಗೂ ಸಾವಯವ ಕೃಷಿ ಸಂಸ್ಥೆಯಲ್ಲಿ ಲಭ್ಯ.

*****

ಧಾರವಾಡ ಕೃವಿವಿ ಮತ್ತು ಇತರೆಡೆಗಳಲ್ಲಿ ಮಣ್ಣು ಪರೀಕ್ಷೆ ಸೌಲಭ್ಯವಿರುವ ಕೇಂದ್ರಗಳು

ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಕೃಷಿ ವಿಜ್ಞಾನ ಕೇಂದ್ರವಿದೆ. ಅಲ್ಲಿ ಮಣ್ಣು ಪರೀಕ್ಷೆ ಸೌಲಭ್ಯವಿದೆ. ಶುಲ್ಕ ಪಾವತಿಸಿ ಮಣ್ಣು ಪರೀಕ್ಷೆಯನ್ನು ಇಲ್ಲಿ ಮಾಡಿಸಬಹುದು.

ಧಾರವಾಡ ಕೃಷಿ ವಿಶ್ವ ವಿದ್ಯಾಲಯದ ಅಡಿಯಲ್ಲಿ ಬರುವ ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ ಅವುಗಳ ವಿಳಾಸ

ಜಿಲ್ಲೆ	ವಿಳಾಸ	ಫೋನ್
ಹಾವೇರಿ	ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ, ತಾ: ರಾಣೆಬೆನ್ನೂರು ಜಿ: ಹಾವೇರಿ	೦೮೩೭೩-೨೫೩೫೨೪
ಧಾರವಾಡ	ಕೃಷಿ ವಿಜ್ಞಾನ ಕೇಂದ್ರ, ಸೈದಾಪುರ ಫಾರ್ಮ್, ಕೃಷಿ ವಿಶ್ವವಿದ್ಯಾಲಯ, ಧಾರವಾಡ	೦೮೩೬-೨೪೪೪೨೬೨
ಬಿಜಾಪುರ	ಕೃಷಿ ವಿಜ್ಞಾನ ಕೇಂದ್ರ, ಹಿಟ್ನಳ್ಳಿ ಫಾರ್ಮ್, ಹಿಟ್ನಳ್ಳಿ (ಎನ್.ಹೆಚ್.೧೩), ಬಿಜಾಪುರ	೦೮೫೩೨-೨೩೦೬೫೮
ಬಾಗಲಕೋಟ	ಕೃಷಿ ವಿಜ್ಞಾನ ಕೇಂದ್ರ, ಗ್ರಾಮೀಣ ಪೋಲೀಸ್ ಸ್ಟೇಶನ್ ಹತ್ತಿರ, ಬಾಗಲಕೋಟ	೦೮೩೫೪-೨೨೩೫೪೩
ಉತ್ತರ ಕನ್ನಡ	ಕೃಷಿ ವಿಜ್ಞಾನ ಕೇಂದ್ರ, ಬನವಾಸಿ ರಸ್ತೆ, ಶಿರಸಿ	೦೮೩೮೪-೨೨೮೪೧೧

ಬೆಳಗಾವಿ ಜಿಲ್ಲೆಯಲ್ಲಿ ತುಕಾನಟ್ಟಿಯಲ್ಲಿರುವ 'ಬರ್ಡ್ಸ್' ಸರ್ಕಾರೇತರ ಸಂಸ್ಥೆಯು ಕೃಷಿ ವಿಜ್ಞಾನ ಕೇಂದ್ರವನ್ನು ನಿರ್ವಹಿಸುತ್ತಿದೆ (೦೮೩೩೨-೨೮೪೯೬೮) ಮತ್ತು ಇದೇ ಜಿಲ್ಲೆಯಲ್ಲಿ ಮತ್ತೊಂದು ಕೃಷಿ ವಿಜ್ಞಾನ ಕೇಂದ್ರವನ್ನು ಗೋಕಾಕದ ದಲ್ಲಿರುವ ಕೆ.ಎಲ್.ಇ. ಸರ್ಕಾರೇತರ ಸಂಸ್ಥೆಯು ಬೈಲಹೊಂಗಲದ ಮತ್ತಿಕೊಪ್ಪದಲ್ಲಿ ನಿರ್ವಹಿಸುತ್ತಿದೆ (೦೮೨೮೮-೨೯೨೨೨೯) ಹಾಗೂ ಗದಗ ಜಿಲ್ಲೆಯಲ್ಲಿ ಹುಲಕೋಟಿಯಲ್ಲಿರುವ 'ಕೆ. ಹೆಚ್. ಪಾಟೀಲ್ ಫೌಂಡೇಶನ್' ಸರ್ಕಾರೇತರ ಸಂಸ್ಥೆಯು ಕೃಷಿ ವಿಜ್ಞಾನ ಕೇಂದ್ರವನ್ನು ನಿರ್ವಹಿಸುತ್ತಿದೆ (೦೮೩೬೨-೨೮೯೦೬೯). ಇಲ್ಲಿಯೂ ಕೂಡ ಮಣ್ಣು ಪರೀಕ್ಷೆ ಸೌಲಭ್ಯವಿದ್ದು ರೈತರು ತಮ್ಮ ಜಮೀನಿನ ಮಣ್ಣು ಮಾದರಿಯನ್ನು ತೆಗೆದು ಇಲ್ಲಿ ನೀಡಬಹುದು. ಶುಲ್ಕ ಹಾಗೂ ಇತರ ವಿವರಗಳಿಗೆ ಆಯಾ ಕೇಂದ್ರಗಳನ್ನು ಸಂಪರ್ಕಿಸಿ.